
ಸಂಪೂರ್ಣವಾಗಿ ಕತ್ತಲು. ಅಷ್ಟೇ ಇಕ್ಕಟ್ಟಾದ ದಾರಿ. ನಡು ಬಾಗಿಸಿಯೇ ನಡೆಯಬೇಕು. ಚೂರು ಸಮತೋಲನ ತಪ್ಪಿದರೂ ಸುರಂಗದ ಹುರುಕಾದ ಒಳಮೈ ನಮಗೆ ತರಚುವುದು. ಉಸಿರಾಟ ಕೂಡ ಸರಾಗವಾಗಿ ನಡೆಯದು. ಬೆವರುತ್ತಾ, ಬೆದರುತ್ತಾ 7–8 ಮೀಟರ್ ದೂರ ಸಾಗಿ ಆಚೆ ಬಂದೆವು. ಸುರಂಗದ ಕತ್ತಲೆಯಿಂದ ಬೆಳಕಿನೆಡೆಗೆ ಸಾಗಿಬಂದ ನಮಗೆ ಪಕ್ಕದ ಟೆಂಟ್‌ನಲ್ಲಿ ಬೇಯಿಸಿದ ಮರಗೆಣಸಿನ ಆತಿಥ್ಯ ಕಾಯುತ್ತಿತ್ತು. ಕಾಡಿನಲ್ಲಿ ಸಿಗುತ್ತಿದ್ದ ಮರಗೆಣಸು ಹಾಗೂ ಸೊಪ್ಪಿನ ಚಹಾ—ಇಷ್ಟೇ ಗೆರಿಲ್ಲಾ ಪಡೆಗೆ ಹಲವು ದಿನಗಳವರೆಗೆ ಆಹಾರವಾಗಿತ್ತಂತೆ.

ಕಾಡು ಸೊಪ್ಪಿನ ಚಹಾ ಹೀರುತ್ತಲೇ 'ಸುರಂಗದ ಬದುಕು ಹೇಗಿತ್ತು' ಎಂಬ ಪ್ರಶ್ನೆಯನ್ನು ನಮ್ಮ ಗೈಡ್ ಮುಂದಿಟ್ಟೆವು. ಅಮೆರಿಕದ ಸೈನಿಕರು ಸುರಂಗವನ್ನು 'ಬ್ಲ್ಯಾಕ್ ಇಕೊ' (Black Icho, ಕತ್ತಲ ಗುಮ್ಮ) ಎಂದು ರೂಪಕದ ಭಾಷೆಯಲ್ಲಿ ಬಣ್ಣಿಸಿದ್ದರು. ಕ್ಲಸ್ಟ್ರೊಫೋಬಿಯಾದಿಂದ (ಸಣ್ಣ ಬಿಲದ ಕತ್ತಲಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ ಎಂಬ ಭೀತಿಯ ಮಾನಸಿಕ ಸ್ಥಿತಿ) ಆ ಸೈನ್ಯ ಬಳಲಿದ್ದುಂಟು. ವಿಯೆಟ್ ಕಾಂಗ್ ಪಡೆಗೆ ಕೂಡ ಸುರಂಗದ ಬದುಕು ಕಠಿಣವಾಗಿತ್ತು. ಹತ್ತಾರು ವಿಧದ ಇರುವೆಗಳು, ವಿಷಕಾರಿ ಹಾವು–ಚೇಳುಗಳು, ಹೆಗ್ಗಣಗಳ ಹಾವಳಿಯನ್ನು ಈ ಸೈನ್ಯ ಎದುರಿಸಬೇಕಿತ್ತು. ಒಳಗೆ ಆಶ್ರಯ ಪಡೆದಿದ್ದವರಿಗೆ ಹಗಲು, ರಾತ್ರಿ ಒಂದೇ ಆಗಿತ್ತು. ಗಾಳಿ–ಬೆಳಕಿಗೆ ಹಲವು ಸಮಯದವರೆಗೆ ಅವರು ತೆರೆದುಕೊಳ್ಳದ ಕಾರಣ ಮಲೇರಿಯಾ ಕೂಡ ಅವರನ್ನು ಬಾಧಿಸಿದ್ದುಂಟು. ಅನಾರೋಗ್ಯಪೀಡಿತರನ್ನು ಸಾಗಿಸಲು ಆಸ್ಪತ್ರೆವರೆಗೆ ಸುರಂಗದ ಸಂಪರ್ಕವಿತ್ತು. ಹೌದು, ನೂರಾರು ಸಾವು–ನೋವುಗಳಿಗೂ ಈ ಸುರಂಗ ಜಾಲ ಮೂಕಪ್ರೇಕ್ಷಕನಾಗಿತ್ತು... ಹೀಗೆಯೇ ವಿವರಗಳು ಸಿಗುತ್ತಾ ಹೋದವು.



ಅಭೇದ್ಯ ಕೋಟೆಯಂತಿದ್ದ 'ಕು ಚಿ ಟನಲ್'

ಸುರಂಗದ ಮೇಲ್ಭಾಗದಲ್ಲಿ ಎಷ್ಟೊಂದು ಹುತ್ತಗಳಿವೆಯಲ್ಲ ಎಂಬ ಪ್ರಶ್ನೆಯೂ ಕಾಡುತ್ತಿತ್ತು. ಅವು ಹುತ್ತಗಳಲ್ಲ, ಸುರಂಗಕ್ಕಾಗಿ ಬಿದಿರಿನ ಕೊಳವೆಗಳಿಂದ ಮಾಡಿದ ವಾತಾನುಕೂಲ ವ್ಯವಸ್ಥೆ ಎಂದು ತಿಳಿಯಿತು. ಶತ್ರು ಸೇನೆಯನ್ನು ಖೆಡ್ಡಾಕ್ಕೆ ಕೆಡವಲು ವಿಯೆಟ್ ಕಾಂಗ್ ಸೇನೆ ಬಿದಿರು ಮತ್ತು ಹರಿತವಾದ ಮೊಳೆಗಳಿಂದ ಸಿದ್ಧಪಡಿಸಿದ ವಿಧ ವಿಧದ ಬೋನುಗಳನ್ನು ಇಡುತ್ತಿತ್ತು. ಫಿಶ್ ಟ್ರ್ಯಾಪ್, ರೋಲಿಂಗ್ ಟ್ರ್ಯಾಪ್, ವಿಂಡೊ ಟ್ರ್ಯಾಪ್, ಡೋರ್ ಟ್ರ್ಯಾಪ್, ಟ್ರೀ ಟ್ರ್ಯಾಪ್ ಎಂಬೆಲ್ಲ 'ಖೆಡ್ಡಾ'ಗಳನ್ನು ನೋಡುತ್ತಾ ಹೋದಾಗ ಆಗಿನ ಸಮರಾಂಗಣದ ಚಿತ್ರಣವೊಂದು ನಮ್ಮೆದುರು ಮೆರವಣಿಗೆ ಹೊರಟಂತೆ ಭಾಸವಾಯಿತು. ಕಾಡಿನ ಮಧ್ಯದಲ್ಲಿದ್ದ ಈ ಸುರಂಗವನ್ನು ಬಯಲಿಗೆ ತರಲೇಬೇಕು ಎನ್ನುವುದು ಅಮೆರಿಕ ಸೇನೆಯ ಹಟ. ಅದಕ್ಕಾಗಿ 'ಹಸಿರು ಮುಕ್ಕಳಿಸುವ ದಟ್ಟ ಕಾನನವನ್ನು ಇಡಿಯಾಗಿ ಹುಣ್ಣಿಮೆಯ ಚಂದಿರನಂತೆ ಮಾಡುವೆವು (ಸುಟ್ಟು ಬೂದಿ ಮಾಡುವೆವು)' ಎಂದು ಸೇನಾ ಮುಖ್ಯಸ್ಥರು ಹೇಳಿದರು. ಆ ಕಾಡಿನ ಮೇಲೆ ಹೆಲಿಕಾಪ್ಟರ್‌ಗಳ ಮೂಲಕ ಏಜೆಂಟ್ ಆರೆಂಜ್ ಎಂಬ ರಾಸಾಯನಿಕವನ್ನೂ ಸುರಿದರು. ಕಾಡು ನಾಶವಾಗಿದ್ದಷ್ಟೇ ಅಲ್ಲ, ಅಲ್ಲಿನ ಜನರ ಬದುಕೂ ನಾಶವಾಯಿತು. ನಾಲ್ಕು ತಲೆಮಾರುಗಳು ಕಳೆದರೂ ಅಲ್ಲಿನ ಜನರನ್ನು ಈಗಲೂ ಅಂಗವೈಕಲ್ಯ, ಬುದ್ಧಿಮಾಂದ್ಯದಂಥ ಸಮಸ್ಯೆಗಳು ಬಾಧಿಸುತ್ತಲೇ ಇವೆ.

ಕು ಚಿ ಟನಲ್ ಈಗ ವಿಯೆಟ್ನಾಂನ ಅತ್ಯಂತ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಅಮೆರಿಕ ಸೇರಿದಂತೆ ಜಗತ್ತಿನ ನಾನಾ ಭಾಗಗಳಿಂದ ಪ್ರವಾಸಿಗರು ಇಲ್ಲಿಗೆ ದಾಂಗುಡಿ ಇಡುತ್ತಿದ್ದಾರೆ. ಪ್ರವಾಸಿಗರಿಗೆ ನೈಜವಾದ ಗನ್–ರೈಫಲ್‌ಗಳಿಂದ ಗುಂಡು ಹಾರಿಸುವ ಅವಕಾಶವನ್ನೂ ಇಲ್ಲಿನ ಮಿಲಿಟರಿ ನೆಲೆಯಲ್ಲಿ ಒದಗಿಸಲಾಗಿದೆ. ಸುರಂಗದ ಬಳಿಯೇ ನಿರಂತರವಾಗಿ ನಡೆಯುವ ಗುಂಡಿನ ಮೊರೆತದಿಂದಾಗಿ ನಾವು ಈಗಲೂ ಯುದ್ಧಭೂಮಿಯಲ್ಲಿ ಇರುವೆವೇನೋ ಎಂಬ ಭ್ರಮೆ ಉಂಟಾಗುತ್ತದೆ.

ಮಾರನೇ ದಿನ ನಾವು ಇಂಡಿಪೆಂಡೆನ್ಸ್ ಪ್ಯಾಲೆಸ್ ನೋಡಲು ಹೋದೆವು. ವಿಯೆಟ್ನಾಂ ಜನ ಇದನ್ನು ರೀಯೂನಿಫಿಕೇಷನ್ ಹಾಲ್ ಎಂದೂ ಕರೆಯುವರು. ಹೋ ಚಿ ಮಿನ್ ಸಿಟಿಯ (ಹಿಂದೆ ಸೈಗಾನ್) ಹೆಗ್ಗುರುತುಗಳಲ್ಲಿ ಇದೂ ಒಂದು. ದಕ್ಷಿಣ ವಿಯೆಟ್ನಾಂನ ರಿಪಬ್ಲಿಕನ್ ಸರ್ಕಾರದ ಅಧ್ಯಕ್ಷರ ಭವನವಾಗಿದ್ದ ಸುಂದರ ಕಟ್ಟಡ ಇದು. 1975ರ ಏಪ್ರಿಲ್ 30ರಂದು ಸೈಗಾನ್ (ದಕ್ಷಿಣ ವಿಯೆಟ್ನಾಂ) ಸರ್ಕಾರ ಪತನಗೊಂಡು, ವಿಯೆಟ್ನಾಂ ಯುದ್ಧ ಕೊನೆಗೊಂಡ ಮೊದಲ ಘೋಷಣೆ ಹೊರಬಿದ್ದಿದ್ದು ಇದೇ ಕಟ್ಟಡದಿಂದ. ವಿಯೆಟ್ ಕಾಂಗ್ ನೇತೃತ್ವದ ಪಡೆಗಳು ಟ್ಯಾಂಕರ್‌ಗಳೊಟ್ಟಿಗೆ ಅಧ್ಯಕ್ಷರ ಭವನದ ಗೇಟ್ ಮುರಿದು ಒಳನುಗ್ಗಿ ಬಂದಾಗ



ಯುದ್ಧ ಅವಶೇಷಗಳ ಮ್ಯೂಸಿಯಂನಲ್ಲಿ ಇಂತಹ ಹತ್ತಾರು ಸಾಧನಗಳು ಸಾವು– ನೋವಿನ ಕಥೆ ಹೇಳುತ್ತವೆ

### ಬುಲೆಟ್ ಹೋಲ್ ಕ್ಯಾಮೆರಾ

ವಿಯೆಟ್ನಾಂ ಯುದ್ಧದ 'ಆ್ಯಕ್ಷನ್' ಚಿತ್ರಗಳನ್ನು ಹೆಕ್ಕಿತರಲು ಹೋಗಿದ್ದ ಜಪಾನ್‌ನ ತೈಜೊ ಇಚಿನೋಸ್, ಕ್ಯಾಮೆರಾ ಹಿಡಿದು ಯುದ್ಧದ ಚಿತ್ರ ಕ್ಲಿಕ್ಕಿಸುತ್ತಿರುವಾಗ ಸಿಡಿದು ಬಂದ ಬುಲೆಟ್‌ವೊಂದು ಕ್ಯಾಮೆರಾವನ್ನು ಹೊಕ್ಕಿತು. ಕೈಯಲ್ಲಿ ಕ್ಯಾಮೆರಾ ಇಲ್ಲದಿದ್ದರೆ ಆ ಛಾಯಾಗ್ರಾಹಕನೇ ಜೀವ ಕಳೆದುಕೊಳ್ಳುತ್ತಿದ್ದ. ಆ ಕ್ಯಾಮೆರಾವನ್ನು ಯುದ್ಧ ಅವಶೇಷಗಳ ಮ್ಯೂಸಿಯಂನಲ್ಲಿ ನೋಡಬಹುದು. ತೈಜೊ ದುರದೃಷ್ಟ ನೋಡಿ, ಮರುವರ್ಷ ಕಾಂಬೋಡಿಯಾದಲ್ಲಿ ಆತ ಸುತ್ತಾಡುವಾಗ ಸೇನೆ ಆತನನ್ನು ಸೆರೆಹಿಡಿದು, ಹತ್ಯೆ ಮಾಡಿತು.

